# ಕಿರು ಸುದ್ದಿ

## ಫೆನೆಸ್ತಾದ ಹೊಸ ಎಕ್ಸ್‌ಕ್ಲೂಸಿವ್ ಶೋರೂಂ ಆರಂಭ

ಮಂಗಳೂರು: ಭಾರತದ ಅತಿದೊಡ್ಡ ಕಿಟಕಿ ಮತ್ತು ಬಾಗಿಲುಗಳ ಬ್ರಾಂಡ್ ಆಗಿರುವ ಫೆನೆಸ್ತಾದ ಹೊಸ ಎಕ್ಸ್‌ಕ್ಲೂಸಿವ್ ಶೋರೂಂ ಮಂಗಳೂರಿನ ನಂತೂರು ಹೂವಿನ ಮಾರುಕಟ್ಟೆ ಬಳಿಯ ಬಿಕರ್ನಕಟ್ಟೆಯಲ್ಲಿ ಆರಂಭವಾಗಿದೆ. ಇದು ಅತ್ಯುನ್ನತ ದರ್ಜೆಯ ಯುಪಿವಿಸಿ ಕಿಟಕಿ ಹಾಗೂ ಬಾಗಿಲುಗಳ ಸಂಗ್ರಹವನ್ನು ಹೊಂದಿದೆ.

ಮಂಗಳೂರು ಶೋರೂಂ ಉದ್ಘಾಟನೆ ಮಾಡಿ ಮಾತನಾಡಿದ ಫೆನೆಸ್ತಾ ಬ್ಯುಸಿನೆಸ್ ಹೆಡ್ ಸಾಕೇತ್ ಜೈನ್, 'ಫೆನೆಸ್ತಾದ ಕಾರ್ಯತಂತ್ರವು ಪ್ರಮುಖವಾಗಿ ಎರಡು ಆಯಾಮಗಳನ್ನು ಹೊಂದಿದೆ. ಅವುಗಳೆಂದರೆ, ಸ್ಪಷ್ಟ ಗ್ರಾಹಕ ಕೇಂದ್ರಿತ ದೃಷ್ಟಿಕೋನ ಮತ್ತು ಹೆಚ್ಚು ಹೆಚ್ಚು ಗ್ರಾಹಕರನ್ನು ತಲುಪುವುದು. ಈ ಅಂಶಗಳು ಹೊಸ ಶೂರೂಂ ಉದ್ಘಾಟನೆಯೊಂದಿಗೆ ಸ್ಪಷ್ಟವಾಗಿದ್ದು 700ಕ್ಕೂ ಹೆಚ್ಚು ವೈವಿಧ್ಯಮಯ ಶ್ರೇಣಿಯ ಆಕರ್ಷಕ ಉತ್ಪನ್ನಗಳನ್ನು ಇದು ಹೊಂದಿದೆ ಎಂದು ವಿವರಿಸಿದರು. ಫೆನೆಸ್ತಾ ಉತ್ಪನ್ನಗಳನ್ನು ಗ್ರಾಹಕರ ಅಗತ್ಯತೆ ಮತ್ತು ಪರಿಸರಾತ್ಮಕ ಅಂಶಗಳಾದ ಶಬ್ದ, ಮಳೆ, ದೂಳು ಮತ್ತು ಮಾಲಿನ್ಯವನ್ನು ಗಮನದಲ್ಲಿಟ್ಟುಕೊಂಡು ತಯಾರಿಸಲಾಗಿದೆ ಎಂದು ವಿವರಿಸಿದರು.

ಶೋರೂಂನಲ್ಲಿ ಉತ್ಪನ್ನಗಳ ಪ್ರದರ್ಶನದೊಂದಿಗೆ ಗ್ರಾಹಕರು ವೈವಿಧ್ಯಮಯ ಶ್ರೇಣಿಯನ್ನು ಅನುಭವಿಸಲು, ಬ್ರಾಂಡ್ ಅರ್ಥ ಮಾಡಿಕೊಳ್ಳಲು ಮತ್ತು ಮಾಹಿತಿಯುಕ್ತ ನಿರ್ಧಾರಗಳನ್ನು ಕೈಗೊಳ್ಳಲು ಅನುವಾಗಲಿದೆ ಎಂದರು. ಇದು ಕರ್ನಾಟಕದ ಮೊಟ್ಟಮೊದಲ ಮಳಿಗೆಯಾಗಿದೆ.